ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE 21/2/21

# ಸಮಾವೇಶ: ಸಂಚಾರ ವ್ಯವಸ್ಥೆ ಬದಲಾವಣೆ

**• ಕನ್ನಡಪ್ರಭ ವಾರ್ತೆ** ಬೆಂಗಳೂರು

ಮೀಸಲಾತಿಗೆ ಒತ್ತಾಯಿಸಿ ಪಂಚಮಸಾಲಿ ಸಮುದಾಯದ ಸಮಾವೇಶ ಆಯೋಜನೆ ಹಿನ್ನೆಲೆಯಲ್ಲಿ ಅರಮನೆ ಮೈದಾನ ಕಡೆ ಸಾಗುವ ರಸ್ತೆಗಳಲ್ಲಿ ಸಂಚಾರ ವ್ಯವಸ್ಥೆ ಬದಲಾವಣೆ ಮಾಡಲಾಗಿದೆ.

## ಕಾರ್ಯಕ್ರಮಕ್ಕೆ ಬರುವ ವಾಹನಗಳು ಹೀಗೆ ಸಾಗಬೇಕು

- **ಮೈಸೂರು ಭಾಗ:** ನಾಯಂಡನಹಳ್ಳಿಯಲ್ಲಿ ಎಡ ತಿರುವು ಪಡೆದು ಸುಮನಹಳ್ಳಿ, ತುಮಕೂರು ರಸ್ತೆ, ಗೊರಗುಂಟೆಪಾಳ್ಯ ಜಂಕ್ಷನ್ ಮೂಲಕ ಹೆಬ್ಬಾಳ, ಜಯಮಹಲ್ ಸಾಗಿ ಅರಮನೆ ಮೈದಾನಕ್ಕೆ ಬರಬೇಕು
- **ತುಮಕೂರು ಕಡೆ:** ಗೊರಗುಂಟೆಪಾಳ್ಯ ಜಂಕ್ಷನ್, ಬಿಇಎಲ್, ಹೆಬ್ಬಾಳ, ಜಯಮಹಲ್ ರಸ್ತೆ ಮೂಲಕ ಮೈದಾನ ತಲುಪಬೇಕು.
- **ಕನಕಪುರ ಭಾಗ-** ಬನಶಂಕರಿ ದೇವಾಲಯ ಬಸ್ ನಿಲ್ದಾಣದಲ್ಲಿ ಬಲ ತಿರುವು ಪಡೆದು ಜಯನಗರದ 4ನೇ ಹಂತ, ಸೌತ್ ಎಂಡ್ ವೃತ್ತ, ಮಿನರ್ವ ವೃತ್ತ, ಟೌನ್‌ಹಾಲ್, ಚಾಲುಕ್ಯ, ವಸಂತ ನಗರ ಅಂಡರ್ ಪಾಸ್, ಜಯಮಹಲ್ ರಸ್ತೆ ಮೂಲಕ ಮೈದಾನಕ್ಕೆ ಬರಬೇಕು.

## ಅರಮನೆ ಮೈದಾನಕ್ಕೆ ಸಾಗುವ ರಸ್ತೆಯಲ್ಲಿ ಮಾರ್ಪಾಡು

- **ಬನ್ನೇರುಘಟ್ಟ ಕಡೆ:** ಡೈರಿ ವೃತ್ತದಲ್ಲಿ ಎಡ ತಿರುವು ಪಡೆದು ಲಾಲ್ ಬಾಗ್ ಮುಖ್ಯದ್ವಾರ, ಮಿನರ್ವ ವೃತ್ತ, ಟೌನ್‌ಹಾಲ್, ಚಾಲುಕ್ಯ, ವಸಂತ ನಗರ ಅಂಡರ್ ಪಾಸ್, ಜಯಮಹಲ್ ರಸ್ತೆ ಮೂಲಕ ಮೈದಾನಕ್ಕೆ ಬರಬೇಕು.
- **ಹೊಸೂರು ಕಡೆ:** ಮಡಿವಾಳ ಚೆಕ್ ಪೋಸ್ಟ್ ಎಡ ತಿರುವು ಪಡೆದು ಡೈರಿ ವೃತ್ತ, ಟೌನ್‌ಹಾಲ್, ಚಾಲುಕ್ಯ, ವಸಂತ ನಗರ ಅಂಡರ್ ಪಾಸ್, ಜಯಮಹಲ್ ರಸ್ತೆ ಮೂಲಕ ಮೈದಾನಕ್ಕೆ ಬರಬೇಕು.
- **ಹಳೇ ಮದ್ರಾಸ್ ರಸ್ತೆ:** ಕೆ.ಆರ್.ಪುರ ತೂಗು ಸೇತುವೆ, ಹೆಣ್ಣೂರು ಜಂಕ್ಷನ್, ನಾಗವಾರ, ಹೆಬ್ಬಾಳ, ಜಯಮಹಲ್ ಮೂಲಕ ಮೈದಾನ ಸೇರುವುದು.
- **ಬಳ್ಳಾರಿ ಕಡೆ:** ಬಳ್ಳಾರಿ ರಸ್ತೆ, ದೇವನಹಳ್ಳಿ, ಚಿಕ್ಕಜಾಲ, ಹುಣಸಮಾರನಹಳ್ಳಿ, ಹೆಬ್ಬಾಳ, ಜಯಮಹಲ್ ಮೂಲಕ ಮೈದಾನ.
- **ದೊಡ್ಡಬಳ್ಳಾಪುರ ಕಡೆ:** ಯಲಹಂಕ ಬೈಪಾಸ್ ಜಂಕ್ಷನ್, ಬಳ್ಳಾರಿ ರಸ್ತೆ, ಹೆಬ್ಬಾಳ, ಜಯಮಹಲ್ ಮೂಲಕ ಮೈದಾನ.

## ಕಾರು-ಬೈಕ್‌ಗಳಲ್ಲಿ ಬರುವವರು



ಕಾರು ಮತ್ತು ದ್ವಿಚಕ್ರ ವಾಹನಗಳಲ್ಲಿ ಆಗಮಿಸುವವರು ರಮಣ ಮಹರ್ಷಿ ರಸ್ತೆ ತ್ರಿಪುರ ವಾಸಿನಿ ಆವರಣ ಗೇಟ್ ನಂ.2ರ ಹಾಗೂ ಜಯಮಹಲ್ ರಸ್ತೆ ಮೂಲಕ ಮೈದಾನ ಪ್ರವೇಶಿಸಬೇಕು. ಅನಂತರ ತ್ರಿಪುರ ವಾಸಿನಿ ಆವರಣದಲ್ಲಿ ವಾಹನ ನಿಲುಗಡೆ ಮಾಡಬೇಕು.

## ಇಲ್ಲಿ ವಾಹನ ಪಾರ್ಕ್ ಮಾಡುವಂತಿಲ್ಲ

ರಮಣ ಮಹರ್ಷಿ ರಸ್ತೆ, ಸರ್.ಸಿ.ವಿ.ರಾಮನ್, ಬಳ್ಳಾರಿ, ಹೆಬ್ಬಾಳ ಮೇಲ್ಸೇತುವೆ, ಜಯಮಹಲ್, ತರಳಬಾಳು, ಎಂ.ವಿ.ಜಯರಾಮನ್ , ಅರಮನೆ, ಆರಮನೆ ಕ್ರಾಸ್, ಪಿಆರ್‌ಟಿಸಿ ಜಂಕ್ಷನ್‌ನಿಂದ ವಾಟರ್ ಟ್ಯಾಂಕ್ ಜಂಕ್ಷನ್, ಟಿ.ಚೌಡಯ್ಯ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ.

## ಗಣ್ಯರ ವಾಹನಗಳು

ಗಣ್ಯರ ವಾಹನಗಳು ರಮಣ ಮಹರ್ಷಿ ರಸ್ತೆ ಮೂಲಕ ಕೃಷ್ಣ ವಿಹಾರ ಮೈದಾನದಲ್ಲಿ ನಿಲುಗಡೆ ಮಾಡಬೇಕು.

**ಪರ್ಯಾಯ ರಸ್ತೆಗಳು:** ಕಾರ್ಯಕ್ರಮದ ವೇಳೆ ಅರಮನೆ ಮೈದಾನದ ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಅಧಿಕವಾಗುವ ಕಾರಣ ಈ ರಸ್ತೆಗಳಿಗೆ ಪರ್ಯಾಯ ರಸ್ತೆಗಳಲ್ಲಿ ಸಾಗಬೇಕು ಎಂದು ಜಂಟಿ ಪೊಲೀಸ್ ಆಯುಕ್ತ (ಸಂಚಾರ) ಡಾ। ರವಿಕಾಂತೇಗೌಡ ಮನವಿ ಮಾಡಿದ್ದಾರೆ.